

ಟಿ.ಎಂ. ಕೃಷ್ಣ ಅವರ ತಂಡದ ಜೊತೆಗೆ ಪಿ.ರಾಜಗೋಪಾಲ್ ದಂಪತಿ

ಬಣ್ಣಗಾರಿಕೆ ಮಾಡಿಕೊಳ್ಳುವ ಮುನ್ನ ದೇವರನ್ನು ಪ್ರಾರ್ಥಿಸುವ ಪೂಜೆಯೊಂದಿಗೆಕಟ್ಟೈಕೂತ್ತು ಪ್ರದರ್ಶನ ಆರಂಭವಾಗುತ್ತದೆ. ಕಥೆಯ ಪ್ರಧಾನ ವೇಷವು ವೇದಿಕೆಗೆ ಬರುವ 'ತೆರೆಪ್ರವೇಶ' ಇಲ್ಲಿ ಬಹಳ ಪ್ರಮುಖವಾದುದು. ತೆರೆಪ್ರವೇಶದಲ್ಲಿ ಕಲಾವಿದನು ಎಷ್ಟು ಸಮರ್ಥನಿದ್ದಾನೆ ಎಂದು ಪ್ರೇಕ್ಷಕರು ಅಳೆದುಬಿಡುತ್ತಾರೆ. ಕಟ್ಟೈಕೂತ್ತುಗೆ ನಿರ್ದಿಷ್ಟವಾದ ಹಾಡುಗಳು ಮತ್ತು 'ವಿರುತ್ತಂ'ಗಳನ್ನು ನಿರ್ದಿಷ್ಟ ರಾಗಗಳಿಗೆ ಅಳವಡಿಸಿ ಬರೆಯಲಾಗಿದೆ. ಅದಕ್ಕೆ ತಕ್ಕಂತ ನೃತ್ಯ ವಿಧಾನಗಳಿವೆ.

**◆ ನೀವು ಕಟ್ಟೈಕೂತ್ತು ಕಲಿಸಲು 'ಕಟ್ಟೈಕೂತ್ತು ಸಂಗಮ್' ಎಂಬ ಗುರುಕುಲವನ್ನು ಆರಂಭಿಸಿದ್ದೀರಿ. ಅದರ ಬಗ್ಗೆ ಹೇಳಿ?**

ಕಾಂಚೀಪುರಂನಿಂದ 8 ಕಿ.ಮೀ. ದೂರದ ಪುಂಜರಸಂತಾಂಗಲ್ ಎಂಬಲ್ಲಿ ಸ್ಥಾಪಿಸಿದ ಗುರುಕುಲ ಚೆನ್ನಾಗಿಯೇ ನಡೆಯಿತು. ಸಮಾಜದ ಅಂಚಿನಲ್ಲಿರುವ ಸಮುದಾಯಗಳಿಗೆ ಸೇರಿದ, ಆರ್ಥಿಕವಾಗಿ ಹಿಂದುಳಿದವರ ಕುಟುಂಬದ ಮಕ್ಕಳು ಇಲ್ಲಿಗೆ ಬಂದು ವಸತಿ ಸಹಿತ ತರಬೇತಿ ಪಡೆಯುತ್ತಿದ್ದರು. ಶಾಲೆಬಿಟ್ಟ ಮಕ್ಕಳು ಇಲ್ಲಿ ಬಂದು ಕಟ್ಟೈಕೂತ್ತು ಕಲಿಯುತ್ತ, ತಮ್ಮ ಓದನ್ನೂ ಮುಂದುವರೆಸುತ್ತಿದ್ದರು. ಪ್ರತೀ ವರ್ಷ 50 ಮಂದಿ ಮಕ್ಕಳಿಗೆ ತರಬೇತಿ ನೀಡುತ್ತಿದ್ದೆವು. 10 ವರ್ಷಗಳ ಕಾಲ ಸುಮಾರು 500 ಮಂದಿ ಕಲಾವಿದರು ತರಬೇತಿ ಪಡೆದು ಹೊರಬೀಳುತ್ತಿದ್ದರು. ಹಲವಾರು ಮಂದಿ ಕಲಾವಿದರು ಈಗ ಪ್ರದರ್ಶನ ನೀಡುತ್ತಿದ್ದಾರೆ. ಕಟ್ಟೈಕೂತ್ತು ಪ್ರದರ್ಶನವನ್ನು ಪುರುಷ ಕಲಾವಿದರು ಮಾತ್ರ ನೀಡುತ್ತಿದ್ದರು. ಆದರೆ ನಾವು ಮಹಿಳೆಯರಿಗೂ ಅವಕಾಶ ನೀಡಿ ತರಬೇತಿ ನೀಡಲಾರಂಭಿಸಿದ್ದು, ಈಗ ಅನೇಕ ಮಹಿಳೆಯರೂ ಈ ಕಲಾಪ್ರಕಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಎಲ್ಲ ಬೆಳವಣಿಗೆಗಳ ಹಿಂದೆ ನನ್ನ ಪತ್ನಿ ಹೆನ್ನೆ ಡಿ. ಬ್ರೂನ್ ಅವರ ಶ್ರಮವಿದೆ. ನೆದರ್‌ಲ್ಯಾಂಡ್‌ನವರಾದ ಆಕೆ ತಮಿಳುನಾಡಿನಲ್ಲಿ ಜನಪದ ಕಲಾ ಪ್ರಕಾರವನ್ನು ಕಲಿಯುವುದಕ್ಕೆಂದು 1984ರಲ್ಲಿ ಬಂದಿದ್ದರು. ಇಲ್ಲಿನ ವರದರಾಜ ಪೆರುಮಾಳ್ ದೇವಸ್ಥಾನದಲ್ಲಿ ನಾವು 1987ರಲ್ಲಿ ಭೇಟಿಯಾಗಿ 1995ರಲ್ಲಿ ನಾವಿಬ್ಬರು ಮದುವೆಯಾದೆವು. ಆಕೆ ಈ ಕಲಾಪ್ರಕಾರಕ್ಕಾಗಿಯೇ ತನ್ನನ್ನು ತಾನು ಸಮರ್ಪಿಸಿಕೊಂಡಿದ್ದಾರೆ. ಈ ಕಲಾಪ್ರಕಾರದ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅವರು ತಮಿಳುನಾಡಿನಲ್ಲಿ ನೆಲೆಸಿ ಮೂರು ದಶಕಗಳೇ ಸಂದವು. ಆಕೆ ಅಧ್ಯಯನಕ್ಕೆ ಇಲ್ಲಿಗೆ ಬಂದಾಗಲೇ, ಕಟ್ಟೈಕೂತ್ತು ಅಳಿವಿನಂಚಿಗೆ ಸಂದಿರುವ ಕಲೆ ಎಂದು ಮಾಧ್ಯಮಗಳು ಹೇಳುತ್ತಿದ್ದವು. ಆದರೆ ಈ